ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜೂನ್ 10, 2020

# ಪತ್ರಿಕಾ ಪ್ರಕಟಣೆ

## ಚಲನಚಿತ್ರ ಪ್ರಶಸ್ತಿ ಆಕ್ಷೇಪಣೆ ಸಲ್ಲಿಸಲು ಅವಕಾಶ

ಬೆಂಗಳೂರು, ಜೂನ್ 10 (ಕರ್ನಾಟಕ ವಾರ್ತೆ)

2019ನೇ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಾಗಿ ಪತ್ರಿಕಾ ಜಾಹೀರಾತು ಮೂಲಕ 01/01/2020 ರಿಂದ 31/01/2020 ಅರ್ಜಿ ಆಹ್ವಾನಿಸಲಾಗಿತ್ತು. ಒಟ್ಟು 179 ಚಲನಚಿತ್ರ ನಿರ್ಮಾಪಕರಿಂದ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಸದರಿ ಅರ್ಜಿಗಳನ್ನು ಹೊರತುಪಡಿಸಿ ಇನ್ನೂ ಯಾವುದಾದರು ಚಿತ್ರ ನಿರ್ಮಾಪಕರು ನಿಗದಿತ ಅವಧಿಯೊಳಗೆ ಇಲಾಖೆಗೆ ಅರ್ಜಿ ಸಲ್ಲಿಸಿದ್ದು, ಪಟ್ಟಿಯಲ್ಲಿ ಬಿಟ್ಟು ಹೋಗಿದ್ದಲ್ಲಿ ಅಂತಹ ಚಿತ್ರ ನಿರ್ಮಾಪಕರು ದಿನಾಂಕ: 20-06-2020 ರೊಳಗಾಗಿ ಉಪನಿರ್ದೇಶಕರು, ಚಲನಚಿತ್ರ ಶಾಖೆ ಇವರಿಗೆ ಇಲಾಖೆಯು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನೀಡಿರುವ ಸ್ವೀಕೃತಿಯ (Acknowledgement) ಮಾಹಿತಿಯನ್ನು ನೀಡಿದರೆ ಅರ್ಜಿಯನ್ನು ಪರಿಗಣಿಸಲಾಗುವುದು.

ಚಿತ್ರಗಳ ಪೈಕಿ ರಿಮೇಕ್ ಅಥವಾ ಡಬ್ಬಿಂಗ್ ಚಿತ್ರಗಳಾಗಿ ನಿರ್ಮಾಣಗೊಂಡ ಚಿತ್ರಗಳೆಂದು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ: 20-06-2020 ರೊಳಗಾಗಿ ಸೂಕ್ತ ದಾಖಲೆಯೊಂದಿಗೆ ಉಪನಿರ್ದೇಶಕರು, ಚಲನಚಿತ್ರ ಶಾಖೆ ಇವರಿಗೆ ಖುದ್ದಾಗಿ ನೀಡುವಂತೆ ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ನೀಡುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಇಲಾಖೆಯ ವೆಬ್ ಸೈಟ್ ವಿಳಾಸ

dipr.karnataka.gov.in ಅಲ್ಲಿ ವೀಕ್ಷಿಸಬಹುದೆಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಣೆ ತಿಳಿಸಿದೆ

**<u>ಅನಧಿಕೃತ ಪಾನ್ ಮಸಾಲ ಉತ್ಪಾದನಾ ಘಟಕಗಳ ಮೇಲೆ ವಾಣಿಜ್ಯ ತೆರಿಗೆ ಇಲಾಖೆಯಿಂದ ದಾಳಿ</u>**

**ಬೆಂಗಳೂರು, ಜೂನ್ 10 (ಕರ್ನಾಟಕ ವಾರ್ತೆ)**

ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳು ತುಮಕೂರು ಹಾಗೂ ಚಿಕ್ಕಬಳ್ಳಾಪುರದಲ್ಲಿ ಅನಧಿಕೃತ ಪಾನ್ ಮಸಾಲ ಉತ್ಪಾದನಾ ಘಟಕಗಳ ಮೇಲೆ ದಾಳಿ ಮಾಡಿ ರೂ. 21 ಲಕ್ಷ ದಂಡ ವಿಧಿಸಿರುತ್ತಾರೆ.

ಕೋವಿಡ್ –19 ಲಾಕ್‌ಡೌನ್ ವೇಳೆಯಲ್ಲಿ ಕೆಲವು ವ್ಯಕ್ತಿಗಳು ಅನಧಿಕೃತ ಸ್ಥಳಗಳಿಂದ ಪಾನ್ ಮಸಾಲ ಹಾಗೂ ತಂಬಾಕು ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಲಭಿಸಿದ ಖಚಿತ ಮಾಹಿತಿಯನ್ನು ಆಧರಿಸಿ ನಿತೇಶ್ ಪಾಟೀಲ್, ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ) ದಕ್ಷಿಣ ವಲಯ, ಬೆಂಗಳೂರು ಇವರ ನೇತೃತ್ವದ ಅಧಿಕಾರಿಗಳ ತಂಡವು ದಿನಾಂಕ 5–6–2020 ರ ಶುಕ್ರವಾರ ಮುಂಜಾನೆ ತುಮಕೂರಿನ 3 ಸ್ಥಳಗಳಲ್ಲಿ ಹಾಗೂ ಚಿಕ್ಕಬಳ್ಳಾಪುರದ 2 ಪಾನ್ ಮಸಾಲ ಉತ್ಪಾದನೆಗೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ಕಂಡು ಅಧಿಕಾರಿಗಳು ಬೆರಗಾಗಿ ಶಿರಾ ಬಳಿ ಒಂದು ಅನಧಿಕೃತ ಗೋದಾಮಿನಲ್ಲಿ 340 ಚೀಲ ಕಚ್ಚಾ ತಂಬಾಕನ್ನು ಸಂಗ್ರಹಿಸಲಾಗಿದ್ದು, ಸದರಿ ಗೋದಾಮಿಗೆ ಮುಂದಿನ ತನಿಖೆಗಾಗಿ ಬೀಗ ಮುದ್ರೆ ಹಾಕಲಾಗಿದೆ. ದಾಖಲೆಗಳನ್ನು ಹೊಂದದೆ ಶೇಖರಿಸಿದ್ದ ಸರಕುಗಳ ಮೇಲೆ ರೂ. 21 ಲಕ್ಷ ತೆರಿಗೆ ಮತ್ತು ದಂಡ ವಿಧಿಸಿ ಆ ಪೈಕಿ ರೂ. 13 ಲಕ್ಷಗಳನ್ನು ಆ ದಿನವೇ ವಸೂಲು ಮಾಡಲಾಗಿದೆ.

ವಾಣಿಜ್ಯ ತೆರಿಗೆಗಳ ಇಲಾಖೆಯು ಪಾನ್ ಮಸಾಲ ಹಾಗೂ ತಂಬಾಕು ಉತ್ಪನ್ನಗಳ ಮಾರಾಟ ಹಾಗೂ ಸಾಗಾಣಿಕೆಯ ಮೇಲೆ ತೀವ್ರ ನಿಗಾ ವಹಿಸಿದ್ದು, ಜಿ.ಎಸ್.ಟಿ. ಕಾಯ್ದೆಯನ್ನು ಉಲ್ಲಂಘಿಸಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದೆಂದು ಈ ಸಂಬಂಧ ಮಾಹಿತಿ ಇದ್ದಲ್ಲಿ ಮಾಹಿತಿದಾರರು ಜಾರಿ, ದಕ್ಷಿಣ ವಲಯದ ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ 080– 25704970 ಮುಖಾಂತರ ಹಂಚಿಕೊಳ್ಳಲು ಎಂ. ಎಸ್. ಶ್ರೀಕರ್, ವಾಣಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ) ಬೆಂಗಳೂರು ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಲೋಗೋ ಸಿದ್ದಪಡಿಸಲು ಅರ್ಜಿ ಆಹ್ವಾನ

ಬೆಂಗಳೂರು, ಜೂನ್ 10 (ಕರ್ನಾಟಕ ವಾರ್ತೆ)

ಸಮಗ್ರ ಮಕ್ಕಳ ರಕ್ಷಣಾ ಯೋಜನೆ ನಿರ್ಲಕ್ಷತೆಗೊಳಗಾದ, ಪರಿತ್ಯಜಿಲ್ಪಟ್ಟ, ದೌರ್ಜನ್ಯಕ್ಕೆ ಒಳಗಾದ ಮತ್ತು ಕುಟುಂಬದಿಂದ ಬೇರ್ಪಟ್ಟ ಮಕ್ಕಳು ದುರ್ಬಲ ಸ್ಥಿತಿಗೆ ತಲುಪದಿರುವಂತೆ ತಡೆಯಲು ಹಾಗೂ ಇಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಮತ್ತು ಸಂಕಷ್ಟದಲ್ಲಿರುವ ಮಕ್ಕಳ ಪರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶವನ್ನು ಹೊಂದಿರುವ ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ಪ್ರತ್ಯೇಕ ನಿರ್ದೇಶನಾಲಯವಾಗಿದ್ದು, ಪ್ರತ್ಯೇಕ ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಲೋಗೋ ಸಿದ್ಧಪಡಿಸಬೇಕಾಗಿರುತ್ತದೆ. ಸೂಕ್ತ ವಿನ್ಯಾಸಕ್ಕೆ ನಗದು ಬಹುಮಾನವನ್ನು ನೀಡಲಾಗುತ್ತದೆ.

ಆಯ್ಕೆಯಾದ ಲೋಗೋ ರಚನೆಗೆ ಸೂಕ್ತ ನಗದು ಬಹುಮಾನ ನೀಡಲಾಗುವುದು. ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ **www.dwcd.kar.nic.in** ವೀಕ್ಷಿಸುವುದು. ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಲೋಗೋ ವಿನ್ಯಾಸವನ್ನು ಸಮಗ್ರ ಮಕ್ಕಳ ರಕ್ಷಣಾ ಯೋಜನೆ C/o ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001. **Email ID:icps.kar@gmail.com Phone No.080-22879381** ಇದಕ್ಕೆ ಕಳುಹಿಸಕೊಡುವಂತೆ ಅಧಿಕೃತ ಪ್ರಕಟಣೆ ತಿಳಿಸಿದೆ.

## ಕನಿಷ್ಠ ಬೆಂಬಲ ಬೆಲೆಯಲ್ಲಿ ಭತ್ತ, ರಾಗಿ, ಬಿಳಿ ಜೋಳ (ಹೈಬ್ರಿಡ್ ಜೋಳ) ಖರೀದಿಯ ಅವಧಿ ವಿಸ್ತರಣೆ

ಬೆಂಗಳೂರು, ಜೂನ್ 10 (ಕರ್ನಾಟಕ ವಾರ್ತೆ)

ಕೋವಿಡ್ – 19 (ನೊವೆಲ್ ಕೊರೊನಾ ವೈರಸ್) ಹರಡುವಿಕೆಯನ್ನು ತಡೆಗಟ್ಟುವ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಲಾಕ್‌ಡೌನ್‌ಅನ್ನು ಸಡಿಲಗೊಳಿಸಿದ್ದು, ಈಗಾಗಲೇ ತಮ್ಮ ಹೆಸರನ್ನು ನೊಂದಾಯಿಸಿಕೊಂಡಿರುವ ರೈತರು ತಾವು ಬೆಳೆದ ಭತ್ತ, ರಾಗಿ ಮತ್ತು ಬಿಳಿ ಜೋಳ (ಹೈಬ್ರಿಡ್ ಜೋಳ) ವನ್ನು ತಮ್ಮ ಹತ್ತಿರದ ಖರೀದಿ ಕೇಂದ್ರಗಳಲ್ಲಿ ಬೆಂಬಲ ಬೆಲೆಯಲ್ಲಿ ಮಾರಾಟ ಮಾಡಲು ಅವಕಾಶ ಮಾಡಲಾಗಿದೆ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಹನುಮನಗೌಡ ಬೆಳಗುರ್ಕಿಯವರು ತಿಳಿಸಿರುತ್ತಾರೆ.

ಭತ್ತ:–

ಕೇಂದ್ರ ಸರ್ಕಾರವು ಭತ್ತಕ್ಕೆ ಬೆಂಬಲ ಬೆಲೆ ಯೋಜನೆಯಡಿ ಗರಿಷ್ಠ 2.00 ಲಕ್ಷ ಟನ್ ಭತ್ತ ಖರೀದಿಸಲು ಅನುಮತಿಸಿದ್ದು, ದಿನಾಂಕ: 09.06.2020ರವರೆಗೆ ಕೇವಲ 503,566.22 ಕ್ವಿಂಟಾಲ್ ಭತ್ತ ಮಾತ್ರ ಖರೀದಿಸಲಾಗಿದೆ. ಈವರೆಗೆ ನೊಂದಾಯಿಸಿಕೊಂಡಿರುವ ರೈತರು ದಿನಾಂಕ: 30.06.2020ರ ವರೆಗೆ ರೈತರಿಂದ ಭತ್ತವನ್ನು ಖರೀದಿಸಲು ಮುಂದುವರೆಸಿದೆ. FAQ ಗುಣಮಟ್ಟದ ಗ್ರೇಡ್ ಎ ಭತ್ತಕ್ಕೆ ಪ್ರತಿ ಕ್ವಿಂಟಾಲ್‌ಗೆ ರೂ.1835 ಹಾಗೂ ಸಾಮಾನ್ಯ ಪ್ರಭೇದದ ಭತ್ತಕ್ಕೆ ಪ್ರತಿ ಕ್ವಿಂಟಾಲ್ ಗೆ ರೂ.1815 ಬೆಂಬಲ ಬೆಲೆ ನಿಗದಿಪಡಿಸಿದೆ.

ರಾಗಿ:–

ಕೇಂದ್ರ ಸರ್ಕಾರವು ರಾಗಿಗೆ ಬೆಂಬಲ ಬೆಲೆ ಯೋಜನೆಯಡಿ ನಿಗದಿಪಡಿಸಿದ 2.00 ಲಕ್ಷ ಮೆಟ್ರಿಕ್ ಟನ್ ಗಳ ಪೈಕಿ ದಿನಾಂಕ: 09.06.2020ರ ವರೆವಿಗೆ 1,261,358.01 ಕ್ವಿಂಟಾಲ್ ಮಾತ್ರ ಖರೀದಿಯಾಗಿರುತ್ತದೆ. ರಾಗಿ ಖರೀದಿಯನ್ನು ದಿನಾಂಕ: 30.06.2020ರವರೆವಿಗೆ ವಿಸ್ತರಿಸಿದ್ದು, ಈಗಾಗಲೇ ನೊಂದಾಯಿಸಿಕೊಂಡ ರೈತರಿಂದ ಗರಿಷ್ಠ 50 ಕ್ವಿಂಟಾಲ್ ರಾಗಿಯನ್ನು ಪ್ರತಿ ರೈತರಿಂದ ಖರೀದಿಸಲಾಗುತ್ತದೆ. FAQ ಗುಣಮಟ್ಟದ ರಾಗಿಗೆ ಪ್ರತಿ ಕ್ವಿಂಟಾಲ್ ಗೆ ರೂ.3150 ಬೆಂಬಲ ಬೆಲೆ ನಿಗದಿಪಡಿಸಿದೆ.

ಬಿಳಿ ಜೋಳ (ಹೈಬ್ರಿಡ್ ಜೋಳ):–

ಕೇಂದ್ರ ಸರ್ಕಾರವು ಬಿಳಿ ಜೋಳ (ಹೈಬ್ರಿಡ್ ಜೋಳ)ವನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ನಿಗದಿಪಡಿಸಿದ್ದ ಮಿತಿ 1241 ಮೆಟ್ರಿಕ್ ಟನ್ ಹೆಚ್ಚಿಸಿ, 2020–21ನೇ ಸಾಲಿನ ಹಿಂಗಾರು (ರಬಿ) ಹಂಗಾಮಿನಲ್ಲಿ 1.00 ಲಕ್ಷ ಮೆಟ್ರಿಕ್ ಟನ್ ಬಿಳಿ ಜೋಳ (ಹೈಬ್ರಿಡ್ ಜೋಳ)ವನ್ನು ಖರೀದಿಸಲು ಅನುಮತಿಸಿದೆ. ದಿನಾಂಕ: 09.06.2020ರವರೆವಿಗೆ ಕೇವಲ 8412.00 ಕ್ವಿಂಟಾಲ್ ಬಿಳಿ ಜೋಳ (ಹೈಬ್ರಿಡ್ ಜೋಳ) ಮಾತ್ರ ಖರೀದಿಯಾಗಿದೆ. ಈವರೆಗೆ ನೊಂದಾಯಿಸಿಕೊಂಡಿರುವ ರೈತರು ಗರಿಷ್ಠ 50 ಕ್ವಿಂಟಾಲ್‌ನಂತೆ ಬಿಳಿ ಜೋಳ

(ಹೈಬ್ರಿಡ್ ಜೋಳ)ವನ್ನು ಬೆಂಬಲ ಬೆಲೆಯಲ್ಲಿ ದಿನಾಂಕ: 30.06.2020ರವರೆವಿಗೆ ಮಾರಾಟ ಮಾಡಲು ಅವಕಾಶವಿದೆ. FAQ ಗುಣಮಟ್ಟದ ಬಿಳಿ ಜೋಳ (ಮಾಲ್ದಂಡಿ) ರೂ.2570 ಮತ್ತು ಬಿಳಿ ಹೈಬ್ರಿಡ್ ಜೋಳಕ್ಕೆ ರೂ.2550 ಬೆಂಬಲ ಬೆಲೆ ನಿಗದಿಪಡಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ರಾಜ್ಯಾದ್ಯಂತ 14 ಸ್ಥಳಗಳಲ್ಲಿ 4 ಅಧಿಕಾರಿಗಳ ವಿರುದ್ಧ ಎಸಿಬಿ ದಾಳಿ

**ಬೆಂಗಳೂರು, ಜೂನ್ 10 (ಕರ್ನಾಟಕ ವಾರ್ತೆ)**

ದಿನಾಂಕ:10.06.2020 ರಂದು ರಾಜ್ಯದ **4 ವಿವಿಧ ಸರ್ಕಾರಿ ನೌಕರರು** ತಮ್ಮ ಬಲ್ಲ ಮೂಲಗಳಿಗಿಂತ ಅಸಮತೋಲನ ಆಸ್ತಿ-ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ **14 ಸ್ಥಳಗಳ ಮೇಲೆ** ಇಂದು ಭ್ರಷ್ಟಾಚಾರ ನಿಗ್ರಹ ದಳ ದಾಳಿ ನಡೆಸಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡೆಸಲಾದ ಸ್ಥಳಗಳ ಹಾಗೂ ಸರ್ಕಾರಿ ಅಧಿಕಾರಿಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. **ಶ್ರೀ. ಎಲ್. ಸತೀಶ್ ಕುಮಾರ್, ಹೆಚ್ಚುವರಿ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು**.
   ಇವರ ಮೈಸೂರು ನಗರದ ಟಿ. ಕೆ. ಲೇಔಟ್‌ನಲ್ಲಿರುವ ವಾಸದ ಮನೆ, ಹಾಗೂ ಇವರು ಬೆಂಗಳೂರು ಡಾಲರ್ಸ್ ಕಾಲೋನಿಯಲ್ಲಿರುವ ಪ್ರಸ್ತುತ ವಾಸದ ಬಾಡಿಗೆ ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ವಾಣಿಜ್ಯ ತೆರಿಗೆ ಕಛೇರಿ, ಗಾಂಧಿನಗರ, ಬೆಂಗಳೂರು.
2. **ಶ್ರೀ ಎನ್.ರಾಮಕೃಷ್ಣ, ವಲಯ ಅರಣ್ಯ ಅಧಿಕಾರಿ, ಶ್ರೀನಿವಾಸಪುರ ವಲಯ ಕೋಲಾರ ಜಿಲ್ಲೆ**.
   ಇವರ ಕೋಲಾರ ಜಿಲ್ಲೆ, ಬಂಗಾರಪೇಟೆ, ವಿಜಯನಗರದಲ್ಲಿನ ನಿವಾಸ, ಹಾಗೂ ಮಿಟ್ಟಹಳ್ಳಿ ಗ್ರಾಮ, ಕೋಲಾರ ಜಿಲ್ಲೆಯಲ್ಲಿನ ಸ್ವಗ್ರಾಮದಲ್ಲಿನ ಮನೆ ಹಾಗೂ ಸ್ನೇಹಿತರ ಕಸ್ತೂರಿ ನಗರ, ಬೆಂಗಳೂರು ನಗರದಲ್ಲಿನ ವಾಸದ ಮನೆ ಮತ್ತು ಇವರು ಕರ್ತವ್ಯ ನಿರ್ವಹಿಸುತ್ತಿರುವ ಶ್ರೀನಿವಾಸಪುರ ವಲಯ ಅರಣ್ಯಾಧಿಕಾರಿ ಕಛೇರಿ, ಕೋಲಾರ ಜಿಲ್ಲೆ.
3. **ಶ್ರೀ. ಗೋಪಶೆಟ್ಟಿ ಮಲ್ಲಿಕಾರ್ಜುನ, ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಯಚೂರು**.
   ಇವರ ರಾಯಚೂರು ಜಿಲ್ಲೆಯ ಐ.ಡಿ.ಎಸ್.ಎಂ.ಟಿ., ಲೇಔಟ್, ಮಂತ್ರಾಲಯ ರಸ್ತೆಯಲ್ಲಿನ ವಾಸದ ಮನೆ, ಹಾಗೂ ಲಿಂಗಸ್ಗೂರು ರಸ್ತೆ, ರಾಯಚೂರು ಇಲ್ಲಿ ತನ್ನ ಪತ್ನಿಯ ಹೆಸರಿನಲ್ಲಿರುವ ಪೆಟ್ರೋಲ್ ಬಂಕ್ ಹಾಗೂ ರಾಯಚೂರು-ಲಿಂಗಸ್ಗೂರು ರಾಜ್ಯ ಹೆದ್ದಾರಿ-20 ಇಲ್ಲಿರುವ ನಾಗಭೂಷಣ್ ಟ್ರ್ಯಾಕ್ಟರ್ ಷೋ ರೂಂ ಹಾಗೂ ಇವರು ಕಾರ್ಯನಿರ್ವಹಿಸುತ್ತಿರುವ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಯಚೂರು.
4. **ಶ್ರೀ ರಾಘಪ್ಪ ಲಾಲಪ್ಪ ಲಮಾಣಿ, ಸಹಾಯಕ ಅಭಿಯಂತರರು ಕೃ.ಭಾ.ಜ.ನಿ.ನಿ. ಎಫ್.ಆರ್.ಎಲ್. ಸರ್ವೆ ಉಪವಿಭಾಗ ನಂ. 2, ಬೀಳಗಿ, ಕ್ಯಾಂಪ್ ಆಲಮಟ್ಟಿ, ಬಾಗಲಕೋಟೆ.**

ಇವರ ಬಾಗಲಕೋಟೆ ನಗರದ ವಿದ್ಯಾಗಿರಿ 8ನೇ ಕ್ರಾಸ್‌ನಲ್ಲಿರುವ ವಾಸದ ಮನೆ ಮತ್ತು ಸಹೋದರನಮಾಲಿಕತ್ವದ ಶಿರಗುಪ್ಪಿ ಎಲ್.ಟಿ. ಗ್ರಾಮದಲ್ಲಿನ ವಾಸದ ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಅಭಿಯಂತರರ ಕಛೇರಿ, ಕೃ.ಭಾ.ಜ.ನಿ.ನಿ. ಎಫ್.ಆರ್.ಎಲ್. ಸರ್ವೆ ಉಪವಿಭಾಗ ನಂ. 2, ಬೀಳಗಿ, ಕ್ಯಾಂಪ್ ಆಲಮಟ್ಟಿ, ಬಾಗಲಕೋಟೆ.

ಕರ್ನಾಟಕ ರಾಜ್ಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ವಿವಿಧ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ಧ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ-ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

## ಮುಖ್ಯಮಂತ್ರಿಗಳಿಂದ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನೂತನ ಕಚೇರಿ, ಲಾಂಚನ ಹಾಗೂ ಜಾಲತಾಣದ ಉದ್ಘಾಟನೆ

**ಬೆಂಗಳೂರು, ಜೂನ್ 10 (ಕರ್ನಾಟಕ ವಾರ್ತೆ)**

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಂದು ಗೃಹ ಕಛೇರಿ ಕೃಷ್ಣಾದಲ್ಲಿ *ಕರ್ನಾಟಕ ಬ್ರಾಹ್ಮಣರ ಅಭಿವೃದ್ಧಿ ಮಂಡಳಿಯ ನೂತನ ಕಚೇರಿ, ಲಾಂಛನ ಹಾಗೂ ಜಾಲತಾಣ"ವನ್ನು (ವಿಡಿಯೋ ಮುಖಾಂತರ) ಉದ್ಘಾಟಿಸಿ* ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನೂತನ ಕಚೇರಿ, ಲಾಂಛನ ಹಾಗೂ ಜಾಲತಾಣವನ್ನು ಸಂತೋಷದಿಂದ ಉದ್ಘಾಟಿಸಿದ್ದೇನೆ. ಯಾವುದೇ ಒಂದು ಸಮುದಾಯವನ್ನು ಸಾರಾಸಗಟಾಗಿ ಮುಂದುವರೆದ ಸಮುದಾಯ ಎಂದು ಹೇಳಲು ಸಾಧ್ಯವಿಲ್ಲ. ಎಲ್ಲ ಸಮುದಾಯಗಳಲ್ಲೂ ಮುಂದುವರೆದವರು ಮತ್ತು ಹಿಂದುಳಿದವರು ಇರುತ್ತಾರೆ. ಅದೇ ರೀತಿ ಪಾರಂಪರಿಕವಾಗಿ ಬ್ರಾಹ್ಮಣ ಸಮುದಾಯವನ್ನು ಮುಂದುವರೆದ ಸಮುದಾಯ ಎಂದು ಗುರುತಿಸಿದ್ದರೂ, ಆರ್ಥಿಕವಾಗಿ ಅಶಕ್ತರಾಗಿರುವ ಹಲವಾರು ಮಂದಿ ಈ ಸಮುದಾಯದಲ್ಲಿದ್ದಾರೆ. ಅಂತಹವರ ಅಭ್ಯುದಯಕ್ಕಾಗಿ ಬ್ರಾಹ್ಮಣರ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು.

ದೇಶದ ಇತಿಹಾಸದಲ್ಲಿ ಬ್ರಾಹ್ಮಣ ಸಮುದಾಯದವರ ಕೊಡುಗೆ ಉಲ್ಲೇಖಾರ್ಹವಾದುದು. ವಿಶೇಷವಾಗಿ ಶಿಕ್ಷಣ ಹಾಗೂ ಸಾಂಸ್ಕೃತಿಕ ಪರಂಪರೆಯ ರಕ್ಷಣೆಯಲ್ಲಿ ಈ ಸಮುದಾಯದ ಸಾಧನೆ ಅದ್ವಿತೀಯವಾದುದು. ಶ್ರೀಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಶ್ರೀ ಮಧ್ವಾಚಾರ್ಯರಂತಹ ಗುರುಶ್ರೇಷ್ಠರ ತತ್ವ ಹಾಗೂ ಆದರ್ಶಗಳ ಹಾದಿಯಲ್ಲಿ ನಡೆದು ಸಮಾಜ ಒಳಿತನ್ನು ಕಂಡಿದೆ. ವೇದೋಪನಿಷತ್ತುಗಳನ್ನು ಅಭ್ಯಸಿಸುವ ಮೂಲಕ ಆಧ್ಯಾತ್ಮಿಕತೆಯನ್ನು ಮನುಕುಲಕ್ಕೆ ವಿಪ್ರ ಸಮಾಜ ಭೋದಿಸುತ್ತಾ ಬಂದಿದೆ. ಬ್ರಾಹ್ಮಣ ಸಮುದಾಯವು ಸಾವಿರಾರು ವರ್ಷಗಳ ಇತಿಹಾಸ ಹಾಗೂ ಪರಂಪರೆಯನ್ನು ಹೊಂದಿದ್ದು, ರಾಷ್ಟ್ರ ನಿರ್ಮಾಣದಲ್ಲಿ ಅಪೂರ್ವ ಕೊಡುಗೆ ನೀಡಿದೆ.

ಬ್ರಾಹ್ಮಣ ಸಮುದಾಯ ಹಣ, ಆಸ್ತಿ, ಸಂಪತ್ತಿಗಿಂತ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುವ ಮೂಲಕ ಸಂಸ್ಕಾರಯುತ ಸಮಾಜದ ನಿರ್ಮಾಣಕ್ಕೆ ಶ್ರಮಿಸುತ್ತಿದೆ. ಅಶಕ್ತರಾದ ಬ್ರಾಹ್ಮಣರು ಆರ್ಥಿಕವಾಗಿ ಸಶಕ್ತರಾಗಲು ಮಂಡಳಿಯ ವತಿಯಿಂದ ಅನೇಕ ವಿಭಿನ್ನ ಯೋಜನೆಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ. ಶಿಕ್ಷಣ, ಕೌಶಲ್ಯಾಭಿವೃದ್ಧಿ, ಸ್ವಯಂ ಉದ್ಯೋಗ ಮತ್ತು ಮೂಲ ಸೌಕರ್ಯಗಳನ್ನು ಒದಗಿಸಿ ಅವರ ಜೀವನ ಮಟ್ಟವನ್ನು ಸುಧಾರಿಸಲು ಯೋಜನೆಗಳು ಸಹಕಾರಿಯಾಗಲಿದೆ.

ವಿದ್ಯಾರ್ಥಿವೇತನ, ಪ್ರತಿಭಾ ಪುರಸ್ಕಾರ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ, ವಿದ್ಯಾರ್ಥಿಗಳಿಗೆ ವಸತಿ ನಿಲಯದ ವ್ಯವಸ್ಥೆ ಕಲ್ಪಿಸಲಾಗಿದೆ. ಅನಾಥ, ನಿರಾಶ್ರಿತ ಅಂಗವಿಕಲ / ವಿಧವೆ ಮಹಿಳೆಯರಿಗೆ, ಹಿರಿಯ ನಾಗರಿಕರಿಗೆ ಮಾಸಿಕ ಪಿಂಚಣಿ, ವೃದ್ಧಾಶ್ರಮ, ವೈದ್ಯಕೀಯ ತಪಾಸಣೆ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯಗಳನ್ನು ಒದಗಿಸುವ ಸದುದ್ದೇಶ ಸ್ವಾಗತಾರ್ಹ. ಸಮುದಾಯದವರಿಗಾಗಿ ಸಾಮೂಹಿಕ ವಿವಾಹ, ಉಪನಯನ ಆಯೋಜನೆ ಸೇರಿದಂತೆ ಯುವ ಪೀಳಿಗೆಯ ಸಂಘಟನೆಗೆ ಅಭಿವೃದ್ಧಿ ಉತ್ಸವಗಳನ್ನು ಆಯೋಜಿಸುವುದುಪ್ರಶಂಸಾರ್ಹ.

ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವ ಯುವಕ-ಯುವತಿಯರಿಗೆ ಪ್ರೋತ್ಸಾಹ ಹಾಗೂ ಸಹಾಯಧನ ನೀಡುವ ಯೋಜನೆಗಳಿವೆ. ಈ ಎಲ್ಲ ಯೋಜನೆಗಳು ಸಮುದಾಯದವರ ಉನ್ನತಿಗಾಗಿ ಹಮ್ಮಿಕೊಂಡಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ಕರ್ನಾಟಕದಲ್ಲಿ ಬ್ರಾಹ್ಮಣರ ಜನಸಂಖ್ಯೆ ಅಂದಾಜು ಶೇಕಡಾ 3 ರಷ್ಟಿದ್ದು, ಬ್ರಾಹ್ಮಣ ಸಮುದಾಯದ ಸಮಗ್ರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ.ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಹಳೇಬೀಡು ಶ್ಯಾಮಣ್ಣ ಸಚ್ಚಿದಾನಂದ ಮೂರ್ತಿ ಅವರ ನೇತೃತದಲ್ಲಿ ಸಮುದಾಯ ಸರ್ವತೋಮುಖ ಅಭಿವೃದ್ಧಿ ಹೊಂದಲಿದೆ ಎಂದು ಭಾವಿಸಿದ್ದೇನೆ. ಮಂಡಳಿಯ ನೂತನ ಕಚೇರಿ ಹಾಗೂ ಜಾಲತಾಣ ಬ್ರಾಹ್ಮಣ ಸಮುದಾಯಕ್ಕೆ ಉಪಯುಕ್ತವಾಗಲಿ ಎಂದು ಹಾರೈಸಿದರು.

## ಬೆಂಗಳೂರು ಜಲಮಂಡಳಿಯಿಂದ ಜೂನ್ 11 ರಂದು ನೀರಿನ ಅದಾಲತ್

**ಬೆಂಗಳೂರು, ಜೂನ್ 10 (ಕರ್ನಾಟಕ ವಾರ್ತೆ)**

ಬೆಂಗಳೂರು ಜಲಮಂಡಲಿಯು ದಿನಾಂಕ:11.06.2020 ಗುರುವಾರ ದಂದು **ಸಕಾನಿಅ(ಪೂರ್ವ)-2-3,(ಪೂರ್ವ)-1-2, (ದಕ್ಷಿಣ-2),(ಆಗ್ನೇಯ-4) ,(ಪಶ್ಚಿಮ-2),(ನೈರುತ್ಯ-2),(ಆಗ್ನೇಯ-2),(ವಾಯುವ್ಯ-3),(ಕೇಂದ್ರ-2)(ಉತ್ತರ-2),(ಈಶಾನ್ಯ-1) ಮತ್ತು (ಉತ್ತರ ವಿಲೇಜ್ -1)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತ್ತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| ಉಪವಿಭಾಗದ ಹೆಸರು | ವಿಳಾಸ | ದೂರವಾಣಿ ಸಂಖ್ಯೆ |
|---|---|---|
| (ಪೂರ್ವ)-2-3 | 1ನೇ ಮುಖ್ಯ ರಸ್ತೆ, ಕಸ್ತೂರಿನಗರ | 9845444058 |
| (ಪೂರ್ವ)-1-2 | ಎ. ನಾರಾಯಣಪುರ ಮುಖ್ಯ ರಸ್ತೆ, ಕೆ.ಆರ್.ಪುರಂ ರೈಲ್ವೇ ನಿಲ್ದಾಣದ ಎದುರು, ಪಟಾಲಮ್ಮ ದೇವಸ್ಥಾನದ ಹತ್ತಿರ, ಹನುಮಾನ್ ಜಂಕ್ಷನ್, ಎ.ನಾರಾಯಣಪುರ. | 28510008 |
| (ದಕ್ಷಿಣ-2) | ವಾಟರ್ ಟ್ಯಾಂಕ್ ಹತ್ತಿರ, 2ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಬಿ.ಟಿ.ಎಂ 2ನೇ ಹಂತ | 40977432 |
| ( ಆಗ್ನೇಯ-4) | 2ನೇ ಅಡ್ಡರಸ್ತೆ, 17ನೇ ಮುಖ್ಯರಸ್ತೆ, ಕೋರಮಂಗಲ 3ನೇ ಬ್ಲಾಕ್, ಬೆಂಗಳೂರು. | 22945245 |
| (ಪಶ್ಚಿಮ-2) | 5ನೇ ಹಂತ, 1ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು | 28611826 |
| (ನೈರುತ್ಯ-2) | ನೆಲಮಹಡಿ, 1ನೇ ಮುಖ್ಯ ರಸ್ತೆ, ಬನಶಂಕರಿ 3ನೇ ಹಂತ,ಬನಗಿರಿನಗರ, ಬೆಂಗಳೂರು. | 22945144 |
| (ಆಗ್ನೇಯ-2) | 10ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ, ಇಂದಿರಾನಗರ ಕ್ಲಬ್ ಹಿಂಭಾಗ, ಹೆಚ್.ಎ.ಎಲ್ 2ನೇ ಹಂತ, ಬೆಂಗಳೂರು. | 22945163 |
| (ವಾಯುವ್ಯ-3) | 5ನೇ ಬ್ಲಾಕ್,ಹೊರವರ್ತುಲ ರಸ್ತೆ, ನಾಗರಬಾವಿ<br>ಬೆಂಗಳೂರು. | 23212181 |
| (ಕೇಂದ್ರ-2) | ಮಿಲ್ಲರ್ಸ್ ರಸ್ತೆ, ಹೈಗ್ರೌಂಡ್ಸ್<br>ಬೆಂಗಳೂರು. | 22945191 |
| (ಉತ್ತರ-2) | 1ನೇ ಮಹಡಿ, ಪಿನಾಕಿನಿ ಭವನ, ದೊಡ್ಡಬಳ್ಳಾಪುರ ಮುಖ್ಯ ರಸ್ತೆ, ಯಲಹಂಕ ನ್ಯೂ ಟೌನ್, ಬೆಂಗಳೂರು. | 28562829 |
| (ಈಶಾನ್ಯ-1) | 1ನೇ ಮಹಡಿ, ಸುವರ್ಣಭವನ, 18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು. | 22945131 |
| (ಉತ್ತರ ವಿಲೇಜ್ -1) | 1ನೇ ಮಹಡಿ, 7ನೇ ಮುಖ್ಯ ರಸ್ತೆ, ಎಂ.ಇ.ಐ ಲೇಔಟ್, ಹೆಸರಘಟ್ಟ ರಸ್ತೆ. | 9845444068 |

**ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ ಈ ಕೆಳಕಂಡಂತಿದೆ.**

| **ಉಪವಿಭಾಗದ ಹೆಸರು** | **ಸೇವಾಠಾಣೆಗಳು** |
|---|---|
| **(ಪೂರ್ವ)-2-3** | ಬಾಣಸವಾಡಿ, ಓ.ಎಂ.ಬಿ.ಆರ್,ಲಿಂಗರಾಜಪುರಂ |
| **(ಪೂರ್ವ)-1-2** | ಎ.ನಾರಾಯಣಪುರ, ದೊಡ್ಡನಕುಂದಿ,ವಿಜ್ಞಾನ ನಗರ, |
| **(ದಕ್ಷಿಣ-2)** | ಹೆಚ್.ಎಸ್. ಆರ್-1, ಕೋಡಿಚಿಕ್ಕನ ಹಳ್ಳಿ, |
| **( ಆಗ್ನೇಯ-4)** | ಕೋರಮಂಗಲ 1 &2, ಬೆಳ್ಳಂದೂರು |
| **(ಪಶ್ಚಿಮ-2)** | ಕೆಂಗೇರಿ, ಐಡಿಯಲ್ ಹೋಮ್ಸ್, ಬಿ.ಇ.ಎಂ.ಎಲ್ ಲೇಔಟ್, ಆರ್.ಆರ್.ನಗರ |
| **(ನೈರುತ್ಯ-2)** | ಕತ್ರಿಗುಪ್ಪೆ, ಹೊಸಕೆರೆಹಳ್ಳಿ,ದೇವಗಿರಿ-1,ಇಟ್ಟಮಡು |
| **(ಆಗ್ನೇಯ-2)** | ಜೀವನ್ ಭೀಮಾನಗರ, ಹೆಚ್.ಎ.ಎಲ್ 2ನೇ ಹಂತ, ಇಂದಿರಾನಗರ, ಬೈಯ್ಯಪ್ಪನಹಳ್ಳಿ, ಸಿ.ವಿ.ರಾಮನ್‌ನಗರ, ಸದಾನಂದನಗರ |
| **(ವಾಯುವ್ಯ-3)** | ನಾಗರಬಾವಿ, ಅನ್ನಪೂರ್ಣೇಶ್ವರಿನರ, ಸರ್.ಎಂ. ವಿ ಲೇಔಟ್, ಮೂಡಲಪಾಳ್ಯ |
| **(ಕೇಂದ್ರ-2)** | ಹೈಗ್ರೌಂಡ್ಸ್,(ಹೆಚ್.ಜಿ.ಆರ್), ಕೋಲ್ಸ್ ಪಾರ್ಕ್, |
| **(ಉತ್ತರ-2)** | ಯಲಹಂಕ ಓಲ್ಡ್ ಟೌನ್, ಯಲಹಂಕ ನ್ಯೂಟೌನ್, ಅಟ್ಟೂರು |
| **(ಈಶಾನ್ಯ-1)** | ಮಲ್ಲೇಶ್ವರಂ 1 & 2, ಶ್ರೀರಾಮಪುರ, ಯಶವಂತಪುರ1 & 2, ಭಾಷ್ಯಂಪಾರ್ಕ್ |
| **( ಉತ್ತರ ವಿಲೇಜ್ -1)** | ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಸಂದ್ರ, ಸಿಡೇದಹಳ್ಳಿ |

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳಬಹುದಾಗಿದೆ.ಹಾಗೂ **ಕೋವಿಡ್-19** ರ ಮಾರ್ಗದರ್ಶನದಂತೆ ಸಭೆಗೆ ಹಾಜರಾಗಲಿರುವ ಸಂದರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳುಬೇಕಾಗಿ ಪ್ರಕಟಣೆ ತಿಳಿಸಿದೆ.

## BWSSB Water Adalath on June 11th

Bengaluru. June 10 (Karnataka Information) BWSSB water Adalath will be held on 11.06.2020 in a AEE (East-2)-3, (East-1)-2, (South -2), (South East-4), (West-2), (South West-2), (South East-2), (North West-3), (Central -2), (North -2) ,(North East-1) and (North Village-1) sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues. The details of the places where the Adalath is held is as follows.

| Sub-division | Address | Phone Number |
|---|---|---|
| (East-2)-3 | 1st Main Road, Kasturinagar | 9845444058 |
| (East-1)-2 | A.Narayanapura Main Road, opp KR Puram Railway Station, Near Patalamma Temple, Hanuman Junction, A.Narayanapura. | 28510008 |
| (South -2) | Near Water Tank, 2nd Cross, 9th Main Road, BTM 2nd Stage. | 40977432 |
| (South East-4) | 2nd Cross, 17th main, Koramangala 3rd Block, Bangalore | 22945245 |
| (West-2) | 5th Stage, 1st main, BEML Layout,RR Nagar. | 28611826 |

| | | |
|---|---|---|
| (South West-2) | Ground Floor, 1st Main, Banashankari 3rd Stage, Banagirinagar,Bangalore | 22945144 |
| (South East-2) | 10th Main Road, 7th Cross, Behind Indiranagar club, HAL 2nd Stage, Bangalore | 22945163 |
| (North West-3) | 5th Block, Outer Ring Road, Nagarabhavi, Bangalore | 23212181 |
| (Central -2) | Millers Road, High Grounds, Bangalore | 22945191 |
| (North -2) | 1st Floor, pinakini Bhavan, Doddaballapura Main road, Yalahanka New Town, Bengalore | 28562829 |
| (Nort East-1) | 1st Floor, Suvarna Bhavan, 18th cross, Margosa Road, Malleshwaram, Bangalore | 22945131 |
| (North Village -1) | 1st floor, 7th Main, MEI Layout, Hesaraghatta Road | 9845444068 |

**The details of service stations coming under the subdivisions mentioned above are as follows:**

| Sub-division | Service Stations |
|---|---|
| (East-2)-3 | Banaswadi, OMBR, Lingarajapuram |
| (East-1)-2 | A.Narayanapura, Doddanakundi, Vignana nagar |
| (South -2) | HSR- 1,Kodichikkanahalli |
| (South East-4) | Koramangala 1 &2, Bellandur |
| (West-2) | Kengeri, Ideal Homes, BEML Layout, RR Nagar |

| | |
|---|---|
| (South West-2) | Katriguppe, Hosakerehalli, Devagiri-1, Ittamadu |
| (South East-2) | Jeevanbheemanagar, HAL 2nd Stage, Indiranagar, Byappanahalli, CV Raman Nagar, Sadanandanagar |
| (North West-3) | Nagarabhavi,Annapoorneshwarinagar, Sir.MV Layout, Moodalapalya |
| (Central -2) | High Grounds(HGR),coles Park, |
| (North -2) | Yelahanka old town, Yelahanka New town,Attur |
| (Nort East-1) | Malleshwaram1&2, Srirampura, Yeshwanthapura 1&2, Bashyam park |
| (North Village -1) | Shettihalli, Abbigere, chikkasandra, sidedahalli |

For any problems regarding the water supply and all, public can contact 24x7 call centre number: 22238888, helpline number: 1916 & whats app no: 8762228888.Public can utilize this adalath facilities to solve the problems regarding water supply. Publics are requested to follow all precautionary measures according to **COVID-19** guidelines while attending the adalath.

# ಗ್ರಂಥಾಲಯ ಇಲಾಖೆ ಸಿಬ್ಬಂದಿಗೆ ಮಾಸ್ಕ್ ಕೊಡುಗೆ

**ಬೆಂಗಳೂರು, ಜೂನ್ 10 (ಕರ್ನಾಟಕ ವಾರ್ತೆ)**

**ಬೆಂಗಳೂರು: ಕೊರೋನಾ ಕಾಲಘಟದಲ್ಲಿ ಕರ್ತವ್ಯ ನಿರ್ವಹಿಸಲು ಅನುವಾಗುವಂತೆ ರಾಜ್ಯದ ಎಲ್ಲೆಡೆಯ ಸಾರ್ವಜನಿಕ ಗ್ರಂಥಾಲಯದ ಸಿಬ್ಬಂದಿಗೆ ರಾಜ್ಯ ಗ್ರಂಥಾಲಯ ಇಲಾಖೆಯ ಮೊದಲ ನಿರ್ದೇಶಕರಾದ ದಿ. ನೀಲಪ್ಪ ದ್ಯಾಮಪ್ಪ ಬಗ್ರಿ ಅವರ ಕುಟುಂಬದ ಸದಸ್ಯರು ಮಾಸ್ಕ್ ಗಳನ್ನು ಉಚಿತವಾಗಿ ನೀಡಿದರು.**

ಗ್ರಂಥಾಲಯ ಇಲಾಖೆಗೆ ನೀಡಲಾದ **ಮಾಸ್ಕ್ ಗಳನ್ನು** ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ದಿ. ದ್ಯಾಮಪ್ಪ ಬಗ್ರಿಯವರ ಧರ್ಮಪತ್ನಿ ಶ್ರೀಮತಿ ಶಾಂತಮ್ಮ ಬಗ್ರಿ ಹಾಗೂ ಅವರ ಪುತ್ರಿ ಅನ್ನಪೂರ್ಣ ಬಗ್ರಿ ಹಾಗೂ ಅವರ ಪುತ್ರ ನಯೋನಿಕಾ ಏ ಕೇರ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಪ್ರಶಾಂತ್ ಎಸ್.ಬಿ. ಹಸ್ತಾಂತರಿಸಿದರು.

ಈ **ಮಾಸ್ಕ್ ಗಳನ್ನು** ರಾಜ್ಯದ ಕೇಂದ್ರ ಗ್ರಂಥಾಲಯ ಸೇರಿದಂತೆ ನಗರ, ಗ್ರಾಮಾಂತರ ಗ್ರಂಥಾಲಯಗಳಿಗೆ ನೀಡುವಂತೆ ಸಚಿವರು ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ. ಸತೀಶ್ ಬಿ. ಹೊಸಮನಿಯವರಿಗೆ ನೀಡಿ ಅತ್ಯಂತ ಪ್ರೀತಿಯಿಂದ ಮತ್ತು ಕಾಳಜಿಯಿಂದ ನೀಡಿರುವ ಈ **ಮಾಸ್ಕ್ ಗಳನ್ನು** ಸದುಪಯೋಗಪಡಿಸಿಕೊಳ್ಳುವಂತೆ ಸಲಹೆ ನೀಡಿದರು. ಇಂತಹ ಮಹತ್ತರ ಕಾರ್ಯಕ್ಕೆ ಮುಂದಾದ ಎನ್.ಡಿ. ಬಗ್ರಿಯವರ ಕುಟುಂಬದವರಿಗೆ ಕೃತಜ್ಞತೆ ಸಲ್ಲಿಸಿ ಈ ಔದಾರ್ಯ ಎಲ್ಲರಿಗೂ ಮಾದರಿಯಾಗಿದೆ ಎಂದರು.

## COMMERCIAL TAX DEPARTMENT RAIDS UNAUTHORISED PAN MASALA MANUFACTURING UNITS

Bengaluru, June 10 (Karnataka Information)

The officers of Commercial Taxes Department of Karnataka raided unauthorized pan masala manufacturing units in Tumkur and Chikkaballapur and levied penalty of Rs 21 lakhs.

Based on credible information that some persons are manufacturing and selling pan masala and tobacco products from undeclared locations during Covid-19 lockdown period, the team of officers headed by Sri. Nitesh k Patil. IAS, Additional Commissioner of Commercial Taxes, Enforcement, South Zone, Bangalore raided 3 places in Tumkur and two places in Chikkaballapur in the early hours on 05-06-2020. The officers were surprised to see pan masala packing

machines inside a godown in farmhouse. An undeclared godown was also found at Sira were 340 bags of raw tobacco was stored. The said godown is sealed for further investigation. Tax and penalty of Rs.21 lakhs has been levied on the stock of goods not covered by documents and Rs.13 lakhs recovered on the same day. Further investigation is in progress.

It is informed that the department is closely watching the movement of pan masala and tobacco products and stringent action will be initiated against persons violating GST law. If anyone has information regarding the illegal movement of goods, the same way be shared with Control room of South Zone Enforcement wing on Phone No.080-25704970 says Official Press Release